

ನೆರೂಡನ ಕವಿತೆಗಳ ಕನ್ನಡ ಅನುವಾದ ಕೃತಿಯ ಬಿಡುಗಡೆ ಸಂದರ್ಭದಲ್ಲಿ ತೇಜಸ್ವಿನಿ ನಿರಂಜನ ಅವರಿಂದ ಕವನ ವಾಚನ.

ಹಾಗೆಯೇ, ನೆರೂಡ ಕನ್ನಡದಲ್ಲಿ ಹೇಗೆ ಇಪ್ಪತ್ತನೇ ಶತಮಾನದ ಅನೇಕ ಗಣ್ಯ ಲೇಖಕರಿಂದ ಹಿಡಿದು, ಇಪ್ಪತ್ತೊಂದನೇ ಶತಮಾನದಲ್ಲಿ ಹೊಸ ತಲೆಮಾರುಗಳನ್ನು ಸೆಳೆಯುತ್ತಿದ್ದಾರೆಂಬುದನ್ನು ಸೂಚಿಸಲೆಂಬಂತೆ ಅವರೆಲ್ಲರನ್ನು ಹೆಸರಿಸುತ್ತ ಹೀಗೆ ಬರೆಯುತ್ತಾರೆ: "ತೇಜಸ್ವಿನಿ ನಿರಂಜನ, ನಿಸಾರ್ ಅಹಮದ್, ಲಂಕೇಶ್, ನಟರಾಜ್ ಹುಳಿಯಾರ್, ದಲಿತ ಬಂಡಾಯದ ಹಲವು ಲೇಖಕರು, ನಯನಾ ಕಾಶ್ಯಪ್, ಜ.ನಾ. ತೇಜಶ್ರೀ ಮೊದಲಾದವರು ನೆರೂಡನ ಬದುಕು ಹಾಗೂ ಕಾವ್ಯದ ಅನುವಾದ, ಸೈದ್ಧಾಂತಿಕತೆ, ಜೀವಪರತೆಗಳನ್ನು ಚರ್ಚಿಸುತ್ತ ಬರೆಯುತ್ತ ಬಂದ ಕಾರಣದಿಂದ ಕನ್ನಡದಲ್ಲಿ ನೆರೂಡ ಸಂವೇದನೆಯೊಂದು ಅಂತರ್ಜಲದ ಬುಗ್ಗೆಗಳಂತೆ ಅಲ್ಲಲ್ಲಿ ಏಳುತ್ತಲೇ ಇದೆ. ಓ.ಎಲ್. ನಾಗಭೂಷಣ ಸ್ವಾಮಿಯವರು ತಮ್ಮ ಅನುವಾದದ ಮೂಲಕ ಇಂಥ ಅಂತರ್ಜಲದ ಹರಿವಿಗೆ ಇನ್ನಷ್ಟು ವೇಗವನ್ನು ತುಂಬಿದ್ದಾರೆ. ನಮ್ಮನ್ನು, ನಮ್ಮ ಭಾವಗಳನ್ನು ಆವಾಹಿಸಿಕೊಳ್ಳುವ ಶಕ್ತಿ ನೆರೂಡನ ಕಾವ್ಯಕ್ಕೆ ಮಾತ್ರವಲ್ಲ, ಅವನ ಗದ್ಯಕ್ಕೂ ಇದೆ. ಇಂಥ ಆವಾಹನೆಯ ಗುಣವನ್ನು ಅದರ ಎಲ್ಲ ತೀವ್ರತೆಯೊಂದಿಗೆ ಓಎಲ್‌ಎನ್ ತಂದಿದ್ದಾರೆ. ಅನುವಾದವೆಂದರೆ ಕೇವಲ ಪದಬದಲಿನ ಕೆಲಸವಲ್ಲ. ಅದೊಂದು ಸಹ ಸೃಜನತೆ ಎಂಬುದನ್ನು ತಿಳಿಸಿದ ಓಎಲ್ಲೆನ್ ಅವರಿಗೆ ಕನ್ನಡದ ಓದುಗರ ಪರವಾಗಿ ಕೃತಜ್ಞತೆಗಳು".

ಈ ಕೃತಿಗೆ ಮಾತ್ರವೆಂದೇನಲ್ಲ, ವಿಶ್ವದ ಅನೇಕ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುವ ಓಎಲ್‌ಎನ್ ಅವರಿಗೆ ಓದುಗರು ಕೃತಜ್ಞರಾಗಿರಬೇಕೆಂಬುದು ನಿರ್ವಿವಾದ. ಆದರೆ 'ಪಾಬ್ಲೊ ನೆರೂಡ ನೆನಪುಗಳು' ಕೃತಿಗೆ ಸಂಬಂಧಿಸಿದಂತೆ ಆ ಮಾತನ್ನು ಹೇಳಬಹುದೇ? ಈ ತಕರಾರು ಅವರ ಅನುವಾದಕ್ಕೆ ಸಂಬಂಧಿಸಿದ್ದಲ್ಲ. ಅವರ ಅನುವಾದದ ಹಿಂದಿನ ನಿಲುವಿಗೆ ಅಥವಾ ಅನುವಾದದ ಎಥಿಕ್ಸ್ ಅಥವಾ ನೀತಿಶಾಸ್ತ್ರಕ್ಕೆ ಸಂಬಂಧಿಸಿದ್ದು. ಅದನ್ನು ಪರಿಶೀಲಿಸಿಲು ಅವರ